ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಗೃಹ

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡಪ್ರಭ    ದಿನಾಂಕ : DATE : 03/08/2019

# ಭಾಸ್ಕರ್ ರಾವ್ ಪೊಲೀಸ್ ಆಯುಕ್ತ

## ಆಯುಕ್ತರ ಕುರ್ಚಿಗೆ ಶಿರಬಾಗಿ ನಮಸ್ಕರಿಸಿ ಕಾರ್ಯಭಾರ ಶುರು | ನಿರ್ಗಮಿತ ಆಯುಕ್ತ ಅಲೋಕ್ ಗೈರು

• **ಕನ್ನಡಪ್ರಭ ವಾರ್ತೆ** ಬೆಂಗಳೂರು 3/8/19

ನಿರ್ಗಮಿತ ಆಯುಕ್ತರ ಗೈರು ಹಾಜರಾತಿಯಲ್ಲೇ ಬೆಂಗಳೂರು ನಗರದ ನೂತನ ಪೊಲೀಸ್ ಆಯುಕ್ತರಾಗಿ 1990ನೇ ಸಾಲಿನ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್ ಶುಕ್ರವಾರ ಮುಸ್ಸಂಜೆ ಅಧಿಕಾರ ಸ್ವೀಕರಿಸಿದರು.

ಆಯುಕ್ತರಾಗಿ ನೇಮಕಾತಿ ಆದೇಶ ಹೊರ ಬಿದ್ದ ಒಂದು ತಾಸಿನಲ್ಲೇ ಆಯುಕ್ತರ ಕಚೇರಿ ಪ್ರವೇಶಿಸಿದ ಭಾಸ್ಕರ್ ರಾವ್ ಅವರು, ನಿರ್ಗಮಿತ ಆಯುಕ್ತ ಅಲೋಕ್ ಕುಮಾರ್ ಅವರಿಗಾಗಿ ಹತ್ತು ನಿಮಿಷಗಳು ಕಾಯ್ದರು. ತಕ್ಷಣವೇ ಹೆಚ್ಚುವರಿ ಆಯುಕ್ತ ಮುರುಗನ್ ಅವರು ಅಲೋಕ್ ಕುಮಾರ್ ಅವರನ್ನು ಸಂಪರ್ಕಿಸುವ ಪ್ರಯತ್ನ ನಡೆಸಿದರೂ ಪ್ರಯೋಜನವಾಗಲಿಲ್ಲ.

ಕೊನೆಗೆ ಭಾಸ್ಕರ್ ರಾವ್ ಅವರು, 'ಆಯುಕ್ತರ ಮನೆಗೆ ಬೀಗ ಹಾಕಲಾಗಿದೆಯಂತೆ. ಹಾಗಾಗಿ ಸರ್ಕಾರದ ಆದೇಶದಂತೆ ಅಧಿಕಾರ ವಹಿಸಿಕೊಳ್ಳುವೆ' ಎಂದು ಮುನ್ನಡೆದರು. ನಂತರ ಆಯುಕ್ತರ ಕುರ್ಚಿಗೆ ಶಿರಬಾಗಿಸಿ ನಮಸ್ಕರಿಸುವ ಮುಖೇನ ಅಧಿಕೃತವಾಗಿ ಕಾರ್ಯಭಾರ ಆರಂಭಿಸಿದರು. ಕಿರಿಯ ಅಧಿಕಾರಿಗಳು ಹೂಗುಚ್ಛ ನೀಡಿ ಆಯುಕ್ತರನ್ನು ಅಭಿನಂದಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ನೂತನ ಆಯುಕ್ತರು, 'ನನಗೆ ಬೆಂಗಳೂರು ಹೊಸದಲ್ಲ. ನಾನು ಆಡಿ ಬೆಳೆದ ಊರಿದು. ಇಲ್ಲಿನ ಸಮಸ್ಯೆಗಳ ನೈಜ ಅರಿವಿದೆ. ಆಯುಕ್ತನೆಂಬ ಹಮ್ಮುಬಿಮ್ಮು ತೊರೆದು ಜನ ಸೇವಕನಾಗಿ ಕೆಲಸ ಮಾಡುತ್ತೇನೆ' ಎಂದು ಹೇಳಿದರು.

ಮೊದಲು ನನ್ನ ಇಲಾಖೆಯ ಸುಧಾರಣೆಗೆ ಗಮನ ಹರಿಸುತ್ತೇನೆ. ಮನೆ ಒಪ್ಪ ಮಾಡಿಕೊಂಡ ನಂತರ ತಾನಾಗಿಯೇ ಜನರಿಗೆ ಒಳ್ಳೆಯ ಸೇವೆ ಸಿಗಲಿದೆ. ಜನಸ್ನೇಹಿ ಪೊಲೀಸ್ ಎಂಬುದು ಕೇವಲ ಘೋಷಣೆಗೆ ಮಾತ್ರ ಸೀಮಿತವಾಗಬಾರದು. ಅದನ್ನು ಜನರ ಭಾವನೆಗಳಲ್ಲಿ ವ್ಯಕ್ತವಾಗುವಂತೆ ಕೆಲಸ ಮಾಡುತ್ತೇನೆ ಎಂದರು.

ಹೆಚ್ಚುವರಿ ಆಯುಕ್ತರ ಪಿ.ಹರಿಶೇಖರನ್, ಎಸ್. ಮುರುಗನ್, ಜಂಟಿ ಆಯುಕ್ತ ಸಂದೀಪ್ ಪಾಟೀಲ್, ಡಿಸಿಪಿಗಳಾದ ಅನುಚೇತ್, ರೋಹಿಣಿ ಕಟೋಚ್ ಸಪೆಟ್, ಎಸ್.ಗಿರೀಶ್, ಡಾ.ಸೌಮ್ಯಲತಾ, ಸಾರಾ ಫಾತಿಮಾ, ಕೆ.ಪಿ.ರವಿಕುಮಾರ್ ಹಾಗೂ ಯೋಗೇಶ್ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

**ಸಂಪ್ರದಾಯಕ್ಕೆ ತಿಲಾಂಜಲಿ:** ಹಲವು ವರ್ಷಗಳಿಂದ ನಿರ್ಗಮಿತ ಆಯುಕ್ತರು ಬ್ಯಾಟನ್ ಹಸ್ತಾಂತರಿಸುವ ಮೂಲಕ ಉತ್ತರಾಧಿಕಾರಿಗೆ ಅಧಿಕಾರ ವಹಿಸುವುದು ಅಲಿಖಿತ ಸಾಂಪ್ರದಾಯವಿತ್ತು. ಆದರೆ ಸರ್ಕಾರದ ದಿಢೀರ್ ವರ್ಗಾವಣೆ ಆದೇಶದಿಂದ ಅಸಮಾಧಾನಗೊಂಡಿದ್ದಾರೆ ಎನ್ನಲಾದ ಅಲೋಕ್, ನೂತನ ಆಯುಕ್ತರ ಪದಗ್ರಹಣ ಕಾರ್ಯಕ್ರಮದಿಂದ ದೂರ ಉಳಿದರು.

ಇದರೊಂದಿಗೆ ಇದೇ ಮೊದಲ ಬಾರಿಗೆ ಬೆಂಗಳೂರು ಪೊಲೀಸ್ ಇತಿಹಾಸದಲ್ಲಿ ಅಧಿಕಾರ ಹಸ್ತಾಂತರದ ರೂಢಿಗೂ ತಿಲಾಂಜಲಿ ಹಾಡಿದಂತಾಯಿತು. ಈ ಬೆಳವಣಿಗೆಗೆ ಕೆಲ ಅಧಿಕಾರಿಗಳು ಅಸಮಾಧಾನ ವ್ಯಕ್ತಪಡಿಸಿದರು. ಇಂತಹ ನಡವಳಿಕೆಯನ್ನು ರಾಜಕಾರಣದಲ್ಲಿ ನೋಡಿದ್ದಾಯ್ತು. ಈಗ ನಮ್ಮಲ್ಲೂ ಕಾಣುವಂತಾಯಿತು. ಇನ್ನೂ ಏನೇನೋ ಇಲಾಖೆ ಸಾಕ್ಷಿಯಾಗಲಿದೆಯೋ ಎಂದೂ ಬೇಸರ ತೋಡಿಕೊಂಡರು.



ನೂತನ ಪೊಲೀಸ್ ಆಯುಕ್ತ ಭಾಸ್ಕರ್‌ರಾವ್ ಅವರು ಕುರ್ಚಿಗೆ ಶಿರಬಾಗಿ ಅಧಿಕಾರ ಸ್ವೀಕರಿಸಿದರು.

### ಅಲ್ಪಾವಧಿ: ಅಲೋಕ್ ಕುಮಾರ್ ದಾಖಲೆ

ಬೆಂಗಳೂರು ನಗರ ಪೊಲೀಸ್ ಇತಿಹಾಸದಲ್ಲಿ ಅಲ್ಪಾವಧಿಗೆ ಕಾರ್ಯನಿರ್ವಹಿಸಿದ ಆಯುಕ್ತರಾಗಿ ಅಲೋಕ್ ಕುಮಾರ್ ದಾಖಲಾಗಿದ್ದಾರೆ. ಈ ಹಿಂದೆ ಪ್ರವೀಣ್ ಸೂದ್ ಅವರು ಎಂಟು ತಿಂಗಳು ಆಯುಕ್ತರಾಗಿದ್ದರು. ಅವರು ಸಹ ರಾಜಕೀಯ ಕ್ಷಿಪ್ರ ಬೆಳವಣಿಗೆಗಳಿಗೆ ತುತ್ತಾಗಿ ಸ್ಥಾನ ಕಳೆದುಕೊಂಡಿದ್ದರು. ಇದೀಗ ಅಲೋಕ್ ಕುಮಾರ್ ಅವರು 47 ದಿನಗಳ ಕಾಲ ಅಧಿಕಾರದಲ್ಲಿದ್ದರು.

### ಭಾಸ್ಕರ್ ರಾವ್ ಅನುಭವಿ ಅಧಿಕಾರಿ

ಬೆಂಗಳೂರು ನಗರದ ನೂತನ ಪೊಲೀಸ್ ಆಯುಕ್ತ ಭಾಸ್ಕರ್ ರಾವ್ ಅವರು 1990ನೇ ಸಾಲಿನ ಐಪಿಎಸ್ ಅಧಿಕಾರಿಯಾಗಿದ್ದಾರೆ. ಭಾಸ್ಕರ್ ರಾವ್ ಅವರು, 2003-04ರಲ್ಲಿ ಬೆಂಗಳೂರು ದಕ್ಷಿಣ ವಿಭಾಗ ಹಾಗೂ ಹುಬ್ಬಳ್ಳಿ ಧಾರವಾಡದ ಡಿಸಿಪಿ ಆಗಿ ಕೆಲಸ ಮಾಡಿದ ಅನುಭವ ಉಳ್ಳವರಾಗಿದ್ದಾರೆ. ಬೆಂಗಳೂರು ಗ್ರಾಮಾಂತರ, ಮಂಡ್ಯ, ದಾವಣಗೆರೆ, ಶಿವಮೊಗ್ಗ ಹಾಗೂ ಕೊಡಗು ಜಿಲ್ಲಾ ಎಸ್‌ಪಿ, ಮೈಸೂರು ಆಯುಕ್ತ, ಆಂತರಿಕ ಭದ್ರತಾ ವಿಭಾಗ ಹಾಗೂ ರಾಜ್ಯ ರೈಲ್ವೆ ಪೊಲೀಸ್ ವಿಭಾಗದ ಐಜಿಪಿ ಹುದ್ದೆಯಲ್ಲಿ ಕೆಲಸ ಮಾಡಿದ್ದಾರೆ. ಅಲ್ಲದೆ, ಸಾರಿಗೆ ಇಲಾಖೆಯ ಆಯುಕ್ತರಾಗಿ ಇಲಾಖೆಯ ಹಲವು ಸುಧಾರಣೆ ತಂದು ಜನಪ್ರಿಯರಾಗಿದ್ದರು. 2001ರಲ್ಲಿ ಅಮೆರಿಕದಲ್ಲಿ ನಡೆದ ಭಯೋತ್ಪಾದಕ ದಾಳಿ ಬಳಿಕ ಅಮೆರಿಕದ ಭದ್ರತಾ ಪಡೆಗಳ ಜೊತೆ ಕೆಲ ದಿನ ಅವರು ಕಾರ್ಯನಿರ್ವಹಿಸಿ ಮೆಚ್ಚುಗೆ ಪಡೆದಿದ್ದರು. ಕಿಯೋನಿಕ್ಸ್ ವ್ಯವಸ್ಥಾಪಕ ನಿರ್ದೇಶಕರೂ ಸಹ ಆಗಿದ್ದರು. ಇವರ ಗಣನೀಯವಾದ ಸೇವೆಗೆ ರಾಷ್ಟ್ರಪತಿ ಪದಕ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಪ್ರಶಸ್ತಿ ಪುರಸ್ಕಾರಗಳು ಸಹ ಸಂದಿವೆ.